ಓ.ಎಸ್. ನಂಃ 291/2021
ಪಿ.ಡಬ್ಲ್ಯೂ-1 (ಸುಭಾಸ)

ದಿನಾಂಕ: 09-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಸ್.ಎಸ್.ಎನ್. ಪ್ರತಿವಾದಿ 3 ರಿಂದ 5 ರವರ ಪರ ವಕೀಲರಿಂದಃ**

ಮೂಲ ಪುರುಷ ಸಿದ್ದಪ್ಪ ನನ್ನ ಅಜ್ಜ ಎಂದರೆ ಸರಿ. ಹಣಮವ್ವ ಸಿದ್ದಪ್ಪ ಇವರ ಹೆಂಡತಿ ಎಂದರೆ ಸರಿ. ಸಿದ್ದಪ್ಪ ಮತ್ತು ಹಣಮವ್ವ ಇವರಿಗೆ ಗೂಳಪ್ಪ, ಬಸಪ್ಪ ಅಂದರೆ 1ನೇ ಪ್ರತಿವಾದಿ, ಶಿವಪ್ಪ ಅಂದರೆ 2ನೇ ಪ್ರತಿವಾದಿ, ಮಹಾದೇವಪ್ಪ, ಕರೆಪ್ಪ ಅಂದರೆ 3ನೇ ಪ್ರತಿವಾದಿ. 2ನೇ ಪ್ರತಿವಾದಿ ಶಿವಪ್ಪ ಇವರ ಹೆಂಡತಿಯ ಹೆಸರು ಸತ್ತೆವ್ವ.

2. ನನ್ನ ತಂದೆ ಗೂಳಪ್ಪ ಇವರಿಗೆ 03 ಜನ ಹೆಂಡತಿಯರು ಇರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿದಾರರು ಇಬ್ಬರು ಹೆಂಡತಿಯರು ಇದ್ದಾರೆ ಎಂದು ಹೇಳುತ್ತಾರೆ. ನನ್ನ ತಾಯಿಯ ಹೆಸರು ಸಿದ್ದವ್ವ, ನನ್ನ ತಂದೆಯ ಇನ್ನೊಬ್ಬರು ಹೆಂಡತಿಯ ಹೆಸರು ಯಲ್ಲವ್ವ. ಸದರಿ ಯಲ್ಲವ್ವ ಇವರಿಗೆ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ಅವರುಗಳು ಕಮಲವ್ವ ಮತ್ತು ಹಣಮಂತ. ಯಲ್ಲವ್ವ ಇವರು ಜೀವಿತ ಇದ್ದಾರೆ. ಈ ದಾವೆಯಲ್ಲಿ ಯಲ್ಲವ್ವ, ಕಮಲವ್ವ ಮತ್ತು ಹಣಮಂತ ಇವರನ್ನು ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

3. ದಾವಾ ಆಸ್ತಿ ಸರ್ವೆ ನಂ.56/1ಅ/1+1/ಅ/2 ನಮಗೆ ನಮ್ಮ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ನಮ್ಮ ತಂದೆ ಗೂಳಪ್ಪ, ನನ್ನ

ಚಿಕ್ಕಪ್ಪಂದಿಯರಾದ ಪ್ರತಿವಾದಿ 1 ಮತ್ತು 2 ರವರು ಸೇರಿ ದಾವಾ ಆಸ್ತಿ ಸರ್ವೆ ನಂ.56/1ಅ/1+1/ಅ/2ನ್ನು ಕೇಶವ ಉಳ್ಳಾಗಡ್ಡಿ ಎನ್ನುವವರಿಗೆ ದಿನಾಂಕ 08/07/1976 ರಂದು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿಯ ಅರ್ಧ ಭಾಗ ಮಾತ್ರ ಕುಟುಂಬದ ಅಡಚಣೆಗಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಜಮೀನು ಮಾರಾಟ ಮಾಡಿದಾಗ 3ನೇ ಪ್ರತಿವಾದಿಯು ಇನ್ನು ಅಪ್ರಾಪ್ತ ವಯಸ್ಕಿನವರು ಇದ್ದರು ಎಂದರೆ ಸರಿಯಲ್ಲ. 1976ರಲ್ಲಿ 3ನೇ ಪ್ರತಿವಾದಿಗೆ ಎಷ್ಟು ವಯಸ್ಸು ಇತ್ತು ಎಂದು ನನಗೆ ಈಗ ಹೇಳಲು ಬರುವುದಿಲ್ಲ. 3ನೇ ಪ್ರತಿವಾದಿಯ ಜನನ ದಿನಾಂಕ ನನಗೆ ಗೊತ್ತಿಲ್ಲ.

4. ದಿಃ 08/07/1976 ರಂದು ಆದ ಸರ್ವೆ ನಂ.56/1ಅ/1+1/ಅ/2 ರ ಖರೀದಿ ಪತ್ರವನ್ನು ನಾನು ನೋಡಿಲ್ಲ. ಸದರಿ ಖರೀದಿ ಪತ್ರದಲ್ಲಿ 3ನೇ ಪ್ರತಿವಾದಿಯ ಅಜ್ಞಾನ ಸಂರಕ್ಷಣೆದಾರಳಾಗಿ ನನ್ನ ಅಜ್ಜಿ ಹಣಮವ್ವ ಇವರ ಹೆಸರು ದಾಖಲ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಮಾರಾಟ ಮಾಡುವಾಗ 3ನೇ ಪ್ರತಿವಾದಿ ಅಪ್ರಾಪ್ತ ವಯಸ್ಕರಿದ್ದುದ್ದರಿಂದ ನನ್ನ ತಂದೆ ಹಾಗೂ ನನ್ನ ಅಜ್ಜಿ ಹಣಮವ್ವ ನ್ಯಾಯಾಲಯದ ಅನುಮತಿ ತೆಗೆದುಕೊಂಡಿದ್ದಾರೆ ಇಲ್ಲವೊ ನನಗೆ ಗೊತ್ತಿಲ್ಲ.

5. ಸರ್ವೆ ನಂ.56/1ಅ/1+1/ಅ/2 ರಲ್ಲಿಯ ಉಳಿದ ಹಿಸ್ಸೆ ಈಗ ಸದ್ಯಕ್ಕೆ ಪ್ರತಿವಾದಿ 1 ಮತ್ತು 3 ರವರ ಹೆಸರಿನಲ್ಲಿ ಇದೆ. ದಿಃ 08/07/1976 ರಂದು ಕೇಶವ ಉಳ್ಳಾಗಡ್ಡಿ ಇವರ ಹೆಸರಿಗೆ ಸದರಿ ಜಮೀನಿನಲ್ಲಿಯ ಅರ್ಧ ಪಾಲಿನ

ಖರೀದಿ ಪತ್ರ ಆದಾಗಿನಿಂದ ಆ ಅರ್ಧ ಪಾಲಿಗೆ ಕೇಶವ ಉಳ್ಳಾಗಡ್ಡಿ ಇವರ ಹೆಸರು ದಾಖಲಾಗಿ ಅವರೇ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿ. ಇನ್ನುಳಿದ ಅರ್ಧ ಪಾಲಿನಲ್ಲಿ ಪ್ರತಿವಾದಿ 1 ಮತ್ತು 3 ಮಾತ್ರ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿದಾರರು ತಾವು ಮತ್ತು ಪ್ರತಿವಾದಿ 2 ರವರು ಸಹ ಕಬ್ಜೆಯಲ್ಲಿ ಇದ್ದುದ್ದಾಗಿ ಹೇಳುತ್ತಾರೆ. ನಾವು ಮತ್ತು 2ನೇ ಪ್ರತಿವಾದಿ ಸರ್ವೆ ನಂ.56/1ಅ/1+1/ಅ/2 ರ ಬಾಕಿ ಉಳಿದ ಅರ್ಧ ಪಾಲಿನಲ್ಲಿ ಕಬ್ಜೆಯಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆ ಹಾಜರ ಮಾಡಿಲ್ಲ.

6. ಸರ್ವೆ ನಂ.56/1ಅ/1+1/ಅ/2 ರಲ್ಲಿ ಉಳಿದ ಅರ್ಧ ಪಾಲಿಗೆ ನನ್ನ ತಂದೆ ಮತ್ತು 2ನೇ ಪ್ರತಿವಾದಿ ಸೇರಿ ಪ್ರತಿವಾದಿ 1 ಮತ್ತು 3 ರವರಿಗೆ ಉಳಿದ ಅರ್ಧ ಪಾಲು ಬಿಟ್ಟು ಕೊಟ್ಟು ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.56/1ಅ/1+1/ಅ/2 ರಲ್ಲಿಯ ಉಳಿದ ಅರ್ಧ ಪಾಲಿಗೆ ಪ್ರತಿವಾದಿ 1 ಮತ್ತು 3 ರವರ ಹೆಸರು ಯಾವ ಆಧಾರದ ಮೇಲೆ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು 2ನೇ ಪ್ರತಿವಾದಿ ಸರ್ವೆ ನಂ.56/1ಅ/1+1/ಅ/2 ರಲ್ಲಿಯ ಉಳಿದ ಅರ್ಧ ಪಾಲು ಪ್ರತಿವಾದಿ 1 ಮತ್ತು 3 ರವರ ಹೆಸರಿಗೆ ಹಕ್ಕು ಬಿಟ್ಟು ಕೊಟ್ಟ ಪ್ರಕಾರ ಡೈರಿ ನಂ.1256 ಮಂಜೂರಾಗಿದೆ ಎಂದರೆ ಸರಿಯಲ್ಲ.

7. ಈ ದಾವೆ ಹೂಡುವ ಸಮಯದಲ್ಲಿ ಡೈರಿ ನಂ.1256 ಮಂಜೂರಾದ ಬಗ್ಗೆ ನಮ್ಮ ಗಮನಕ್ಕೆ ಬಂದಿರುತ್ತದೆ. ಡೈರಿ ನಂ.1256 ಯಾವ ವರ್ಷದಲ್ಲಿ

ಮಂಜೂರಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಡೈರಿ ನಂ.1256 ಮಂಜೂರಾಗಿದ್ದು ನಮ್ಮ ಗಮನಕ್ಕೆ ಬಂದ ನಂತರ ಅದನ್ನು ಪ್ರಶ್ನಿಸಿ ಸಹಾಯ ಆಯುಕ್ತರ ಕಚೇರಿಯಲ್ಲಿ ಯಾವುದೇ ಅಪೀಲು ಸಲ್ಲಿಸಿಲ್ಲ ಆದರೆ ಈ ದಾವೆ ಸಲ್ಲಿಸಿದ್ದೇವೆ. ಈ ದಾವೆಯಲ್ಲಿ ಡೈರಿ ನಂ.1256 ತಪ್ಪು ಇದೆ ಎಂದು ವಾದ ಪತ್ರದಲ್ಲಿ ಬರೆಯಿಸಿದ್ದೇನೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿಯು ಸಹ  ಡೈರಿ ನಂ.1256 ತಪ್ಪು ಇದೆ ಎಂದು ಬರೆಯಿಸಿದ್ದೇನೆ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಎಲ್ಲಿಯೂ ಸಹ ಡೈರಿ ನಂ.1256 ತಪ್ಪು ಇದೆ ಎಂದು ಬರೆಯಿಸಿಲ್ಲ ಎಂದರೆ ಸರಿಯಲ್ಲ.

8. ಡೈರಿ ನಂ.1256 ರ ಪ್ರಕಾರ ಸರ್ವೆ ನಂ.56/1ಅ/1+1/ಅ/2 ರಲ್ಲಿ ನಮಗೆ ಮತ್ತು 2ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.56/1ಅ/1+1/ಅ/2 ರ ಉತಾರದಲ್ಲಿ ಅರ್ಧ ಹಿಸ್ಸೆಗೆ ಕೇಶವ ಉಳ್ಳಾಗಡ್ಡಿ ಇವರ ಹೆಸರು ಮತ್ತು ಇನ್ನುಳಿದ ಅರ್ಧ ಹಿಸ್ಸೆಗೆ ಪ್ರತಿವಾದಿ 1 ಮತ್ತು 3 ರವರ ಹೆಸರು ದಾಖಲ ಇದೆ ಎಂದರೆ ಸರಿ.

9. ಪ್ರತಿವಾದಿ 1 ಮತ್ತು 3 ಸರ್ವೆ ನಂ.56/1ಅ/1+1/ಅ/2 ರಲ್ಲಿ ತಮಗೆ ಅರ್ಧ ಹಿಸ್ಸೆ ಹಾಗೂ ಕೇಶವ ಉಳ್ಳಾಗಡ್ಡಿ ಇವರಿಗೆ ಅರ್ಧ ಹಿಸ್ಸೆ ಎಂದು ಕಂದಾಯ ಇಲಾಖೆಯಲ್ಲಿ ಭಾಗ ಮಾಡಿಕೊಡಿ ಎಂದು ಅರ್ಜಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದ ಪ್ರಕಾರ ಪ್ರತಿವಾದಿ 1 ಮತ್ತು 3 ರವರಿಗೆ 03ಎ-37ಗು-08ಅಣೆ  ಹಾಗೂ ಕೇಶವ ಉಳ್ಳಾಗಡ್ಡಿ ಇವರಿಗೆ 03ಎ-37ಗು-08ಅಣೆ

ಕಂದಾಯ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದ ಪ್ರಕಾರ 1997ರಲ್ಲಿ ಡೈರಿ ನಂ.1264 ಮಂಜೂರಾಗಿದೆ ಎಂದರೆ ಸರಿ. ಡೈರಿ ನಂ.1264ನ್ನು ಪ್ರಶ್ನಿಸಿ ಸಹಾಯಕ ಆಯುಕ್ತರ ಕಚೇರಿಯಲ್ಲಿ ಯಾವುದೇ ಅಪೀಲು ಮಾಡಿಲ್ಲ ಆದರೆ ಈ ದಾವೆ ಸಲ್ಲಿಸಿದ್ದೇವೆ.

10. ಕೇಶವ ಉಳ್ಳಾಗಡ್ಡಿ ಇವರ ಹೆಸರಿಗೆ 03ಎ-37ಗು-08ಅಣೆ ಜಮೀನು ಕಂದಾಯ ದಾಖಲೆಗಳಲ್ಲಿ ದಾಖಲಾದ ನಂತರ ಸದರಿ ಜಮೀನನ್ನು ತಮ್ಮ ಮಗನಿಗೆ ಹಕ್ಕು ಬಿಟ್ಟು ಕೊಟ್ಟ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಬಿಟ್ಟು ಕೊಟ್ಟ ಪತ್ರದ ಪ್ರಕಾರ ಡೈರಿ ನಂ.1281 ಮಂಜೂರಾಗಿದೆ ಎಂದರೆ ಸರಿ. ಡೈರಿ ನಂ.1281ನ್ನು ಪ್ರಶ್ನಿಸಿ ಸಹಾಯಕ ಆಯುಕ್ತರ ಕಚೇರಿಯಲ್ಲಿ ಯಾವುದೇ ಅಪೀಲು ಮಾಡಿಲ್ಲ.

11. ನಮ್ಮ ಮನೆತನಕ್ಕೆ ಸರ್ವೆ ನಂ.17/ಎ ಹಾಗೂ 18/5 ಎಂದು ಇನ್ನೂ ಎರಡು ಆಸ್ತಿಗಳಿವೆ ಎಂದರೆ ಸರಿ. ಸದರಿ ಆಸ್ತಿಗಳು ಮೂಲತಃ ರೇವಪ್ಪ ಸಿದ್ದಪ್ಪ ಪಾಟೀಲ ಇವರಿಗೆ ಸೇರಿರತಕ್ಕಂತಹ ಆಸ್ತಿಗಳು ಎಂದರೆ ಸರಿ. ಸದರಿ ರೇವಪ್ಪ ಸಿದ್ದಪ್ಪ ಪಾಟೀಲ ಇವರಿಗೆ ಮನೆತನದ ಅಡಚಣೆ ಇದ್ದುದ್ದಕ್ಕಾಗಿ ಸರ್ವೆ ನಂ.17/ಎ ಹಾಗೂ 18/5ನ್ನು ಮಾರಾಟ ಮಾಡಲು ತೆಗೆದಿದ್ದರು ಎಂದರೆ ಸರಿ. ನನ್ನ ಅಜ್ಜಿ ಹಣಮವ್ವ ಸರ್ವೆ ನಂ.56/1ಅ/1+1/ಅ/2 ರ ಜಮೀನಿನಿಂದ ಬಂದ ಉತ್ಪನ್ನದಿಂದ ಸರ್ವೆ ನಂ.17/ಎ ಹಾಗೂ 18/5ನ್ನು ರೇವಪ್ಪ ಸಿದ್ದಪ್ಪ ಪಾಟೀಲ ಇವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ.

12. ನಮ್ಮ ಜಂಟಿ ಕುಟುಂಬದ ಪರವಾಗಿ ಸರ್ವೆ ನಂ.17/ಎ ಹಾಗೂ 18/5ಕ್ಕೆ ನನ್ನ ಅಜ್ಜ ಹಣಮವ್ವ ಇವರ ಹೆಸರು ದಾಖಲಾಗಿದೆ ಎಂದರೆ ಸರಿ. ಸದರಿ ಜಮೀನುಗಳ ಖರೀದಿ ಪತ್ರಗಳ ಆಧಾರದ ಮೇಲೆಡ್ಯೆರಿ ನಂ.4013 ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.17/ಎ ಹಾಗೂ 18/5 ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿದಾರರು ಸರ್ವೆ ನಂ.17/ಎ ಆಸ್ತಿ ಈ ದಾವೆಯಲ್ಲಿ ಸೇರಿಸಿದ್ದು ಸರ್ವೆ ನಂ.18/5 ಈ ದಾವೆಯಲ್ಲಿ ಸೇರಿಸಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.18/5 ನನ್ನ ಅಜ್ಜಿ ನನ್ನ ತಂದೆ ಹಾಗೂ ಪ್ರತಿವಾದಿ 1 ರಿಂದ 3 ದೇವಸ್ಥಾನಕ್ಕೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಆದ್ದರಿಂದ ಆ ಜಮೀನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ದಾನ ಪತ್ರವನ್ನು 3ನೇ ಪ್ರತಿವಾದಿಗೆ ಗೊತ್ತಿಲ್ಲದ ಹಾಗೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.18/5 ದೇವಸ್ಥಾನಕ್ಕೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಬರೆದಿಲ್ಲ.

13. ಸದರಿ ದಾನ ಪತ್ರಕ್ಕೆ ನನ್ನ ಅಜ್ಜಿ, ನನ್ನ ತಂದೆ, ಪ್ರತಿವಾದಿ 1, 2 ಮತ್ತು 3 ಸಹಿ ಮಾಡಿರುತ್ತಾರೆ. ಸದರಿ ದಾನ ಪತ್ರ ಮಾಡಿಕೊಡುವಾಗ 3ನೇ ಪ್ರತಿವಾದಿ ಅಪ್ರಾಪ್ತ ವಯಸ್ಕರಿದ್ದು ಅವರಿಗೆ ಗೊತ್ತಾಗದ ಹಾಗೆ ಒಂದು ಸುಳ್ಳು ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.18/5 ರಲ್ಲಿ ತನ್ನ ಪಾಲಿಗೆ ಬರುವ ಆಸ್ತಿಯಲ್ಲಿ 3ನೇ ಪ್ರತಿವಾದಿ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿದಾರರು ಎಲ್ಲರು ಕಬ್ಜೆಯಲ್ಲಿ ಇದ್ದಾರೆ ಎಂದು ಹೇಳುತ್ತಾರೆ. ಸರ್ವೆ ನಂ.18/5 ಕ್ಕೆ ಸಂಬಂಧಪಟ್ಟ ಹಾಗೆ ಈ ದಾವೆಯಲ್ಲಿ ನಾನು ಯಾವುದೇ ದಾಖಲೆ ಹಾಜರ ಮಾಡಿಲ್ಲ.

ಓ.ಎಸ್. ನಂಃ 291/2021
ಪಿ.ಡಬ್ಲ್ಯೂ-1 (ಸುಭಾಸ)

14. ಸರ್ವೆ ನಂ.18/5 ರ ಉತಾರದಲ್ಲಿ ಈಗ ಹಣಮಂತ ಮಹಾರಾಜರು ಹಾಗೂ ಯಲ್ಲಾಲಿಂಗ ಮಹಾರಾಜರು ಮುಗಳಖೋಡ ಎಂದು ನಮೂದು ಇದೆ. ಹಣಮಂತ ಮಹಾರಾಜರು ಹಾಗೂ ಯಲ್ಲಾಲಿಂಗ ಮಹಾರಾಜರು ಮುಗಳಖೋಡ ಇವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂ.18/5 ರ ಕಬ್ಜೆಯಲ್ಲಿ ಈಗಲೂ ಸಹ ನಾವೇ ಇದ್ದೇವೆ ಎಂದು ತೋರಿಸಲು ಹಾಗೂ ಹಣಮಂತ ಮಹಾರಾಜರು ಹಾಗೂ ಯಲ್ಲಾಲಿಂಗ ಮಹಾರಾಜರು ಮುಗಳಖೋಡ ಇವರನ್ನು ಈ ದಾವೆಯಲ್ಲಿ ಸೇರಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸರ್ವೆ ನಂ.18/5 ರ ಕಬ್ಜೆಯಲ್ಲಿ 3ನೇ ಪ್ರತಿವಾದಿಯನ್ನು ಹೊರತುಪಡಿಸಿ ನಮ್ಮ ಮನೆತನದವರು ಬೇರೆ ಯಾರು ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ